ಆಧಾರಗಳಿಂದ ತಿಳಿದುಬಂದಿದೆ. ಲೋಕಯ್ಯ ಪೂಜಾರಿ ಮರಣ ಕೊಲೆಯಿಂದ ಆಗಿದೆ ಎಂಬ ಆಪಾದನೆಯನ್ನು ಮತ್ತು ಈ ರೀತಿ ಆಪಾದನೆ ಸಂಶಯಕ್ಕೆ ಒಳಗಾದ ವ್ಯಕ್ತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದರೂ ಸಹ ಈ ಆಪಾದನೆಗಳು ಸತ್ಯಕ್ಕೆ ದೂರವಾದುದೆಂದು ಸಿ.ಓ.ಡಿ.ನವರು ನಡೆಸಿದ ತಪಾಸಣೆಯಲ್ಲಿ ತಿಳಿದು ಬಂದಿದೆ.

ಅಧ್ಯಕ್ಷರು.— ಶ್ರೀ ಪಿ.ಬಿ. ಓಂಕಾರಮೂರ್ತಿ, ಸದಸ್ಯರು ಗೈರು ಹಾಜರಾಗಿದ್ದಾರೆ.

ಯರಮರಸ್ ಸಹಕಾರಿ ನೂಲಿನ ಗಿರಣಿ ಮುಚ್ಚಿರುವುದರಿಂದ ಕಾರ್ಮಿಕರ ಜೀವನಕ್ಕೆ ತೊಂದರೆಯಾಗಿರುವುದು:

ಶ್ರೀ ಆರ್. ವೆಂಕಟರಾವಯ್ಯ.—ರಾಯಚೂರು ಜಿಲ್ಲೆಯ ಯರಮರಸ್ ಸಹಕಾರಿ ನೂಲಿನ ಗಿರಣಿ ಮುಚ್ಚಲ್ಪಟ್ಟು ಹಲವಾರು ತಿಂಗಳು ಕಳೆದು ಹೋದವು. ಸಚಿವ ಸಮಿತಿ ಗಿರಣಿಗೆ ಭೇಟಿ ಕೊಟ್ಟಿದೆ. ನೂರಾರು ಕಾರ್ಮಿಕರು ಕೆಲಸ ಕಳೆದುಕೊಂಡು ಬೀದಿ ಪಾಲಾಗಿದ್ದಾರೆ. ಸಚಿವ ಸಮಿತಿ ಗಿರಣಿಯನ್ನು ತೆಗೆಸುವ ಆಶ್ವಾಸನೆಯನ್ನು ಕಾರ್ಮಿಕರಿಗೆ ಕೊಟ್ಟು ಬಂದಿದ್ದಾರೆ, ಇದುವರೆಗೆ ಯಾವುದೇ ರೀತಿಯ ಇತ್ಯರ್ಥವಾಗಿಲ್ಲ. ಕಾರ್ಮಿಕರ ಜೀವನ ಸಂಕಟಮಯವಾಗಿದೆ, ಕಾರಣ ಈ ಬಡ ಕಾರ್ಮಿಕರಿಗೆ ಕೆಲಸ ಒದಗಿಸುವುದು ಬಹಳ ಅವಶ್ಯವಾಗಿದೆ. ಆದ್ದರಿಂದ ಮಾನ್ಯ ಕಾರ್ಮಿಕ ಮಂತ್ರಿಗಳು ಈ ಸಮಸ್ಯೆಯನ್ನು ಗಮನಕ್ಕೆ ತೆಗೆದುಕೊಂಡು ಮುಚ್ಚಿರುವ ಗಿರಣಿಯನ್ನು ತೆಗೆಯುವಂತೆ ಮತ್ತು ಕಾರ್ಮಿಕರಿಗೆ ಬರಬೇಕಾದ ವೇತನವನ್ನು ಕೊಡಿಸುವಂತೆ ಈ ಬಗ್ಗೆ ಎಲ್ಲಾ ವಿಷಯಗಳನ್ನು ಸದನಕ್ಕೆ ತಿಳಿಸುವಂತೆ ಮಾನ್ಯ ಕಾರ್ಮಿಕ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಆರ್.ಬಿ. ಪೋತದಾರ್.—ಮಾನ್ಯ ಅಧ್ಯಕ್ಷರೆ, ರಾಯಚೂರು ಸ್ಪಿನ್ನಿಂಗ್ ಮಿಲ್ ಲಾಸ್ ಆಗಲಿಕ್ಕೆ ಕಾರಣವೇನೆಂದರೆ ಕಾಟನ್ ಪ್ರೈಸ್ ಏನಿದೆ, ನೂಲಿನ ಪ್ರೈಸ್ ಏನಿದೆ ಅದೊಂದು ಕಾರಣ. ಪವರ್ ಕಟ್‌ನಿಂದ ಪ್ರೊಡಕ್ಷನ್ ಮೇಲೆ ಪರಿಣಾಮ ಬೀರಿದೆ. ಹೆಲ್ಪಿಂಗ್ ಬಗ್ಗೆ ವಿಚಾರ ಮಾಡುವುದಾದರೆ ರಿಲೀಫ್ ಅಂಡರ್ ಟೇಕಿಂಗ್ ಎಂದು ಇದನ್ನು ಡಿಕ್ಲೇರ್ ಮಾಡುತ್ತೇವೆ. ಕಮರ್ಷಿಯಲ್ ಟ್ಯಾಕ್ಸ್ ಅರಿಯರ್ಸ್ ಅನ್ನು ಪೋಸ್ಟ್‌ಪೋನ್ ಮಾಡುತ್ತೇವೆ.

ಈ ಸ್ಪಿನ್ನಿಂಗ್ ಮಿಲ್ಲಿಗೆ ೩,೨೬,೮೦,೦೦೦ ರೂಪಾಯಿಂಗಳನ್ನು ಕೊಟ್ಟಿವು. ಈಗ ಕ್ಯಾಬಿನೆಟ್ ಸಬ್ ಕಮಿಟಿ ಮುಂದೆ ಈ ವಿಚಾರ ಇದೆ. ಸಬ್ ಕಮಿಟಿಯವರು ಮಾರ್ಚ್ ೧೧ ರಂದು ಹೋಗಿ ಬಂದಿದ್ದಾರೆ. ಕಾರ್ಮಿಕರ ಕಷ್ಟ ನಮಗೂ ಗೊತ್ತು. ಆದುದರಿಂದ ಅವರಿಂದ ರಿಪೋರ್ಟ್ ತರಿಸಿಕೊಂಡು, ಕೂಡಲೇ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು.— ಶ್ರೀಮತಿ ವಸಂತ ವಿ. ಸಾಲಿಯಾನ, ಸದಸ್ಯರು ಹಾಜರಿರಲಿಲ್ಲ.

ಶ್ರೀ ಗೋಪಾಲ ಮುಕಂದ ಕಾನಡೆ, ಸದಸ್ಯರು ಹಾಜರಿರಲಿಲ್ಲ.

4. ಸಂಕೇಶ್ವರ ಮತ ಕ್ಷೇತ್ರದ ಬೈರಾಪುರ ಕೆಲಸವನ್ನು ಪೂರ್ಣಗೊಳಿಸಿ ಉಳಿದ ಜಾಗದಲ್ಲಿ ಚಿಕ್ಕ ಬೃಂದಾವನ ಮಾಡಲು ಸಲಹೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.— ಮಾನ್ಯ ಅಧ್ಯಕ್ಷರೇ, ಹಂಕ್ಯೇರಿ ತಾಲ್ಲೂಕಿನ ಸಂಕೇಶ್ವರ ಮತಕ್ಷೇತ್ರದ ಬೈರಾಪುರ ಕೆರೆಯ ಕೆಲಸವು ಜಾಗತಿಕ ಬ್ಯಾಂಕಿನ ನೆರವಿನಿಂದ ಪೂರ್ಣಗೊಳ್ಳುವ ಹಂತದಲ್ಲಿದೆ. ಆದಷ್ಟು ಶೀಘ್ರವಾಗಿ ಈ ಕೆಲಸವು ಪೂರ್ತಿ ಮಾಡುವುದರಲ್ಲಿ ಕ್ರಮವನ್ನು ಕೈಗೊಳ್ಳಬೇಕು. ಈ ಕೆರೆಯ ನಿರ್ಮಾಣದ ನಂತರ ಕೆರೆಯ ಕಟ್ಟಡದ ಪೂರ್ವ ಭಾಗದಲ್ಲಿ ಸುಮಾರು ೭ ಎಕರೆ ಜಮೀನು ಖಾಲಿ ಉಳಿಯುತ್ತದೆಂದು ಕಂಡುಬರುತ್ತದೆ. ಖಾಲಿ ಉಳಿಯುವ ಸದರಿ ೭ ಎಕರೆ ಜಮೀನನ್ನು ತೋಟಗಾರಿಕಾ ಇಲಾಖೆಗೆ ವಹಿಸಿಕೊಟ್ಟು, ತೋಟಗಾರಿಕೆ ಅಭಿವೃದ್ಧಿ ಮಾಡುವುದಕ್ಕಾಗಿ ಸಸಿ ನರ್ಮಾಣ ಹಾಗೂ ಸಂಶೋಧನೆ ಕೇಂದ್ರವನ್ನು ಮಾಡುವುದು ಉಚಿತವೆಂದು ನಾನು ಭಾವಿಸಿರುತ್ತೇನೆ. ಹಾಗೂ ಲೋಕೋಪಯೋಗಿ ಇಲಾಖೆಗೆ ಈ ಜಮೀನನ್ನು ತೋಟಗಾರಿಕೆ ಇಲಾಖೆಗೆ ವರ್ಗಮಾಡಿ